ದಿಃ **20-07-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ.**05** ಮತ್ತು **06** ರ ಪರ ಶ್ರೀ. **NVC** ವಕೀಲರವರಿಂದಃ

ನಾನು ಶಾಲೆಯನ್ನು ಕಲೆತಿರುವುದಿಲ್ಲ. ನನ್ನ ಪ್ರಮಾಣ ಪತ್ರವು ಇಂಗ್ಲೀಷನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಕನ್ನಡದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸಾಕ್ಷಿ ಪ್ರಮಾಣ ಪತ್ರವನ್ನು ಕನ್ನಡದಲ್ಲಿ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ನಾನು ನನ್ನ ವಕೀಲರಿಗೆ ಮಾಹಿತಿ ನೀಡಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ನಾನು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಬರೆಸಿದ ಮೇಲೆ ನಾನು ಏನು ಬರೆದಿದ್ದಾರೆ ಎಂದು ಕೇಳಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತೀಯ ಚೆಕ್ಕಬಂದಿಯನ್ನು ಬರೆಸಿರುವುದಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ನನಗೆ ಅದೆಲ್ಲ ಗೊತ್ತಾಗುವುದಿಲ್ಲ ದಾವಾ ಆಸ್ತೀಯು ಎಷ್ಟು ವಿಸ್ತೀರ್ಣ ಇದೆ ಎಂದು ಹೇಳುವುದಕ್ಕೆ ಬರುತ್ತದೆ ಎಂದು ನುಡಿಯತ್ತಾರೆ. ದಾವಾ ಆಸ್ತೀಯು ಒಟ್ಟು **03** ಆಗಿರುತ್ತದೆ. **1) 8** ಎಕರೆ **30** ಸೆಂಟ್ಸ್ ಇರುತ್ತದೆ. **2) 7** ಎಕರೆ ಇರುತ್ತದೆ. **3) 2** ಎಕರೆ **30** ಸೆಂಟ್ಸ್ ಇರುತ್ತದೆ. ಒಟ್ಟು ಎಷ್ಟು ಆಗುತ್ತದೆ ಎಂದರೆ ಸಾಕ್ಷಿಯು ಲೆಕ್ಕ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತೀಗಳ ಸರ್ವೇ ನಂಬರ ನನಗೆ ಗೊತ್ತಿರುವುದಿಲ್ಲ. ಅವುಗಳ ಮಾರುಕಟ್ಟೆಯ ಬೆಲೆ ಎಷ್ಟಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತೀಗಳ ಮಾರುಕಟ್ಟೆ ಬೆಲೆ ಎಷ್ಟು ಬರೆಸಿದ್ದೇನೆ ಎಂದು ನೆನಪು ಇಲ್ಲ. ಇವೆಲ್ಲಾ ದಾವಾ ಆಸ್ತೀಗಳು ಸೇರಿಸಿದರೆ **20** ಎಕರೆ ಆಗುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು **20** ಎಕರೆಗೆ **1.60** ಎಕರೆ ಕಡಿಮೆ ಆಗಬಹುದು. ಈ ದಾವಾ ಆಸ್ತೀಗಳ ಬೆಲೆ **40** ರಿಂದ **50** ಲಕ್ಷದವರೆಗೂ ಆಗಬಹುದು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ವಂಶಾವಳಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ವಂಶಾವಳಿಯು ಸರಿಯಿಲ್ಲ ಎಂದರೆ ಸರಿ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿ **05** ಮತ್ತು **06** ರವರ ವಂಶಾವಳಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದನ್ನು ನಾನು ನೋಡಿರುವುದಿಲ್ಲ. ನಾವು ಒಟ್ಟು **02** ಹೆಣ್ಣುಮಕ್ಕಳು ಮತ್ತು **03** ಜನ ಗಂಡು ಮಕ್ಕಳು. ನನ್ನ ಅಕ್ಕ ಬಸಮ್ಮ, ಅಣ್ಣ ನಿಂಗಪ್ಪ ಮತ್ತು ತಮ್ಮ ನಾಗರಾಜ ತೀರಿಕೊಂಡಿರುತ್ತಾರೆ. ಬಸಮ್ಮನ ಗಂಡನ ಹೆಸರು ಅಂದಾನೆಪ್ಪ ಆಗಿದ್ದು ಅವರು ಸಹ ತೀರಿಕೊಂಡಿರುತ್ತಾರೆ. ಬಸಮ್ಮ ಮತ್ತು ಅಂದಾನೆಪ್ಪ ಅವರಿಗೆ ಇಬ್ಬರು ಮಕ್ಕಳಿದ್ದು ಅವರ ಹೆಸರು ಬಸಲಿಂಗಪ್ಪ ಹಾಗೂ ಲಲಿತಾ, ಇವರು ಸಹ ತೀರಿಕೊಂಡಿರುತ್ತಾರೆ. ಬಸಲಿಂಗಪ್ಪ ಅವರ ಹೆಂಡತಿಯ ಹೆಸರು ಶಿವಲಿಲಾ ಹಾಗೂ ಅವರ ಮಗಳು ಶಿವಲಿಲಾ

ಇರುತ್ತಾರೆ. ಲಲಿತಾ ಅವರಿಗೆ ಮಕ್ಕಳಿರುವುದಿಲ್ಲ. ವಾದಿ ಪರ ವಕೀಲರು ಆಕ್ಷೇಪಣೆ ಮಾಡಿದ್ದು ಇರುತ್ತದೆ. ನಿಂಗಪ್ಪನ ಹೆಂಡತಿ ಹೊಳೆಯಮ್ಮ ಇರುತ್ತಾರೆ ಎಂದರೆ ಸರಿ. ಅವರಿಗೆ ಒಂದು ಗಂಡು ಮಗ ಇದ್ದು ಎರಡು ಹೆಣ್ಣು ಮಕ್ಕಳು ಇರುತ್ತಾರೆ. ನಿಂಗಪ್ಪನ ಮಗನ ಹೆಸರು ರವಿ ಎಂದರೆ ಸರಿ. ಹೆಣ್ಣುಮಕ್ಕಳ ಹೆಸರು ನನಗೆ ಗೊತ್ತಿರುವುದಿಲ್ಲ ಅವರು ಜೀವಂತ ಇರುತ್ತಾರೆ. ನಾಗರಾಜನ ಹೆಂಡತಿಯ ಹೆಸರು ನೇತ್ರಾವತಿ (ಪ್ರತಿವಾದಿ **04**), ಇವರಿಗೆ ಮಕ್ಕಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿ **04** ರವರನ್ನು ನಾನು ಮರುವಿವಾಹ ಮಾಡಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅವರಿಗೆ ಈಗ **3** ಜನ ಮಕ್ಕಳು ಇರುತ್ತಾರೆ. ನಾನು ಕಾನೂನಿನ ಪ್ರಕಾರ ವಂಶಾವಳಿಯನ್ನು ಸಲ್ಲಿಸಿರುವುದಿಲ್ಲ ಹೀಗಾಗಿ ದಾವಾ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತೀಯ ಮಾರುಕಟ್ಟೆ ಬೆಲೆಯ ಮೇಲೆ ಹಾಗೂ ನನ್ನ ಹಿಸ್ಸೆಯ ಮೇಲೆ ಈ ನ್ಯಾಯಾಲಯಕ್ಕೆ ನನ್ನ ದಾವೆಯನ್ನು ನಡೆಸುವ ಅಧಿಕಾರ ಇಲ್ಲ ಎಂದರೆ ನನಗೆ ಗೂತ್ತಿರುವುದಿಲ್ಲ. ದಾವಾ ಶೆಡ್ಯೂಲ್ **A** ಆಸ್ತೀಯು ಗಾಣದ ಶಿವಲಿಂಗಪ್ಪ ಅವರ ಹೆಸರಿನಲ್ಲಿ ಇರುತ್ತದೆ. ಈ ಆಸ್ತೀಯು ಮೂಲತಹ ನಮ್ಮ ತಾಯಿಯ ಹೆಸರಿನಲ್ಲಿ ಇರುತ್ತದೆ. ಈ ಆಸ್ತೀಯನ್ನು ಬಸವರಾಜಪ್ಪ, ನಿಂಗಪ್ಪ ಹಾಗೂ ನಾಗಪ್ಪರವರು ಮಾರಿದ್ದು ನಾನು ನನ್ನ ಅಕ್ಕ ಸಹಿ ಹಾಕಿರುವುದಿಲ್ಲ. ಈ ದಾವಾ ಹಾಕುವ **29** ವರ್ಷ ಮುಂಚೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಗಂಡನ ಮನೆಯಲ್ಲಿ ಇದ್ದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಖರೀದಿ ಕೊಟ್ಟಿರುವ ವಿಷಯ ದಾಸನ ಹಳ್ಳಿಗೆ ಬಂದ ಮೇಲೆ ಗೊತ್ತಾಗಿರುತ್ತದೆ. ಖರೀದಿ ಪತ್ರದ ಪ್ರಕಾರ ಪ್ರತಿವಾದಿ **04** ರವರ ಹೆಸರು ಹಕ್ಕು ಬದಲಾವಣೆ ವಹಿಯಲ್ಲಿ ಬದಲಾವಣೆ ಆಗಿ ಪ್ರತಿವಾದಿ **04** ರವರ ಹೆಸರು ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮ್ಯೂಟೇಶನ ಎಂಟ್ರಿಯ ವಿರುದ್ಧ ನಾನು **AC** ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸದರಿ ಮ್ಯೂಟೇಶನ್ ಎಂಟ್ರಿ ಇವತ್ತಿನವರೆಗೂ ಅಸ್ತಿತ್ವದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **04** ರವರು ದಾಖಲೆಗಳನ್ನು ಪರಿಶೀಲಿಸಿ ಸ್ಥಾನಿಕ ಚೌಕಾಶಿ ಮಾಡಿ ದಾಖಲೆಯನ್ನು ಪರಿಶೀಲಿಸಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. **2010** ನೇ ಇಸವಿಯಲ್ಲಿ ಪ್ರತಿವಾದಿ **05** ರವರು ಪ್ರತಿವಾದಿ **06** ರವರ ಹೆಸರಿನಲ್ಲಿ ಖಾತೆಯನ್ನು ಬದಲಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶೆಡ್ಯೂಲ್ **A** ಆಸ್ತೀಯು ಪ್ರತಿವಾದಿ **06** ರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ **06** ರವರು ಸದರಿ ಶೆಡ್ಯೂಲ್ **A** ಆಸ್ತೀಯನ್ನು ಒತ್ತೆ ಇಟ್ಟು ಬ್ಯಾಂಕ ಹಾಗೂ ಸಹಕಾರಿ ಸಂಘದಿಂದ ಸಾಲವನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇವತ್ತಿಗೂ ಈ ಆಸ್ತೀಯಲ್ಲಿ ಪ್ರತಿವಾದಿ **06** ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂಬರ **01** ರಿಂದ **03**

ರವರಿಗೆ ದಾಸರಹಳ್ಳಿಯಲ್ಲಿ ಮನೆ ಇರುತ್ತದೆ ಎಂದರೆ ಸಾಕ್ಷಿಯು ಮನೆ ಇಲ್ಲ ಅವರು ಚಪ್ಪರ ಹಾಕಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ. ಚಪ್ಪರ ಹಾಕಿಕೊಂಡು ಇರುವ ಜಾಗ **04** ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಇರುತ್ತದೆ. ನನ್ನ ಅಣ್ಣತಮ್ಮಂದಿರಿಗೆ ದಾವಾ ಆಸ್ತೀಯಲ್ಲಿರುವ ಆಸ್ತೀಗಳನ್ನು ಬಿಟ್ಟು ಬೇರೆ ಆಸ್ತೀಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ **04** ರ ಗಂಡನ ಹೆಸರಿನಲ್ಲಿ **2.70** ಎಕರೆ ಇರುತ್ತದೆ. ಸಾಕ್ಷಿಯು ಮುಂದುವರೆದು ಈ ಆಸ್ತೀಯನ್ನು ನನ್ನ ಹೆಸರಿಗೆ ಮಾಡಿಕೊಡುತ್ತೇನೆ ಎಂದು ಪ್ರತಿವಾದಿ **04** ರವರು ಹೇಳಿದ್ದರಿಂದ ನಾನು ಈ ಆಸ್ತೀಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ಮೇಲೆ ಹೇಳಿದ **2.70** ಎಕರೆ ಆಸ್ತೀಯನ್ನು ನಾನು ಮಾರಿರುತ್ತೇನೆ. ಈ ಆಸ್ತೀಯನ್ನು ನಾನು ದಾವಾ ಹಾಕುವ ಮುಂಚೆ ಪ್ರತಿವಾದಿ **04** ರ ಮರುವಿವಾಹಗೋಸ್ಕರ ಮಾರಿರುತ್ತೇನೆ. ಈ ಆಸ್ತೀಯು ನಾಗರಾಜನಿಗೆ **(** ಪ್ರತಿವಾದಿ **04** ರ ಗಂಡ**)** ನನ್ನ ತಾಯಿಯಿಂದ ಬಂದಿರುತ್ತದೆ. ಶೆಡ್ಯೂಲ್ **A** ರಿಂದ **C** ಆಸ್ತೀಯನ್ನು ಬಿಟ್ಟು ಪ್ರತಿವಾದಿಯರು ಬೇರೆ ಯಾರು ಆಸ್ತೀಯನ್ನು ಮಾರಿರುವುದಿಲ್ಲ ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಮಾರಿರುತ್ತಾರೆ. ಪ್ರತಿವಾದಿ **05** ಮತ್ತು **06** ರವರು ಸದ್ಭಾವಣಾ ಖರೀದಿದಾರರು ಎಂದರೆ ಸಾಕ್ಷಿಯು ಅಕ್ಕ ತಂಗಿಯರನ್ನ ಕರಿಯದೆ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಶೆಡ್ಯೂಲ್ **A** ಆಸ್ತೀಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನನ್ನ ಹಕ್ಕು ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಖರೀದಿಯು ನನಗೆ ಬಾಂದಾಯಿಸುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ **05** ಹಾಗೂ **06** ರವರು ಶೆಡ್ಯೂಲ್ **A** ಆಸ್ತೀಯ ಕರವನ್ನು ಸರಕಾರಕ್ಕೆ ತುಂಬುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ **05** ಮತ್ತು **06** ರವರ ಮೇಲೆ ದಾವೆ ಹಾಕಲು ನನಗೆ ಹಕ್ಕಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಯ ಆಸ್ತೀಯ ಮೇಲೆ ನನಗೆ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ **05** ಮತ್ತು **06** ರವರ ಮೇಲೆ ದಾವೆ ಹಾಕಲು ಸಮಂಜಸವಾದ ಕಾರಣ ಉಂಟಾಗದಿದ್ದರೂ ಸಹ ಸುಳ್ಳು ದಾಖಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ **05** ಮತ್ತು **06** ರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)*

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

( ಶ್ರೀಮತಿ ಅಕ್ಷತಾ ಟಿ )

ದಿವಾಣಿ ನ್ಯಾಯಾಧೀಶರು,

ಹಡಗಲಿ.